MAY 22, 2026

# AKASHAVANI - DHARWAD
# PRADESH SAMACHARA (KANNADA) 07.05 A.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ;** 6ನೇ ಆವೃತ್ತಿಯ, ಯುವ ವಿಜ್ಞಾನಿ ಕಾರ್ಯಕ್ರಮ, ಇಂದು ಬೆಂಗಳೂರಿನಲ್ಲಿ, ಸಂಪನ್ನ.
- **50 ಸಾವಿರಕ್ಕೂ ಅಧಿಕ, ವನವಾಸಿ** ಕುಟುಂಬಗಳಿಗೆ, ಪೌಷ್ಟಿಕ ಆಹಾರ ಪೂರೈಕೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- **ಧಾರವಾಡದ ಮಾವು ಬೆಳೆಗಾರರ ಬಳಗದಿಂದ,** ಸಾವಯವ ಮಾವು ಮೇಳ.
- **ಆಕಾಶವಾಣಿಗೆ 90;** ಆಕಾಶವಾಣಿ ಮೈಸೂರು ಕೇಂದ್ರದ, ಬಾನುಲಿ ಬರವಣಿಗೆ ಕಾರ್ಯಾಗಾರ, ಯಶಸ್ವಿ.

<><><>

**ಈಗ ವಾರ್ತೆಗಳ ವಿವರ**

<><><>

**ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಇಸ್ರೋ,** ದೇಶದ ವಿವಿಧ ರಾಜ್ಯಗಳ, 10ನೇ ತರಗತಿ ವಿದ್ಯಾರ್ಥಿಗಳಿಗೆ, ಬಾಹ್ಯಾಕಾಶ ವಿಜ್ಞಾನದ ಕುರಿತು, ಮಾಹಿತಿ ನೀಡಲು ಆಯೋಜಿಸಿದ್ದ, 6ನೇ ಯುವಿಕ–ಯುವ ವಿಜ್ಞಾನಿ ಕಾರ್ಯಕ್ರಮ, ಇಂದು ಸಂಪನ್ನಗೊಳ್ಳಲಿದೆ. ಬೆಂಗಳೂರಿನ ಯು.ಆರ್.ರಾವ್ ಉಪಗ್ರಹ ಕೇಂದ್ರ ಸೇರಿದಂತೆ, ದೇಶದ ವಿವಿಧ, ಒಂಬತ್ತು ಇಸ್ರೋ ಕೇಂದ್ರಗಳಲ್ಲಿ, ಯುವ ವಿಜ್ಞಾನಿ ಕಾರ್ಯಕ್ರಮ್ – ಯುವಿಕಾದಡಿ, ಒಂಬತ್ತನೇ ತರಗತಿ ಉತ್ತೀರ್ಣರಾದ, ಸಾವಿರದ 3 ನೂರಾ 20 ವಿದ್ಯಾರ್ಥಿಗಳಿಗೆ, ಕಳೆದ ಐದು ಆವೃತ್ತಿಗಳಲ್ಲಿ, ಎರಡು ವಾರಗಳ ವಸತಿ ಸಹಿತ ತರಬೇತಿ ನೀಡಲಾಗಿದೆ. ಪ್ರದೇಶ ಸಮಾಚಾರಕ್ಕಾಗಿ, ಯುವಿಕಾ ಕುರಿತು, ಮಾಹಿತಿ ನೀಡಿದ್ದಾರೆ, ಇಸ್ರೋದ, ಬೆಂಗಳೂರಿನ ಯು.ಆರ್.ರಾವ್ ಉಪಗ್ರಹ ಕೇಂದ್ರದ ಹಿರಿಯ ವಿಜ್ಞಾನಿ, ಡಾಕ್ಟರ್ ಬಿ.ಆರ್.ನಾಗೇಂದ್ರ.

<><><>

**ಡಾ. ಬಿ.ಆರ್. ನಾಗೇಂದ್ರ ಧ್ವನಿ 70 ಸೆಕೆಂದುಗಳು**

<><><>

**ರಾಜ್ಯದ ಅರಣ್ಯ ಮತ್ತು ಅರಣ್ಯದಂಚಿನಲ್ಲಿ ವಾಸಿಸುತ್ತಿರುವ,** ಬುಡಕಟ್ಟು ಸಮುದಾಯಗಳ, 50 ಸಾವಿರಕ್ಕೂ ಅಧಿಕ ಕುಟುಂಬಗಳಿಗೆ, ಪೌಷ್ಟಿಕ ಆಹಾರ ಪೂರೈಸಲು, 269 ಕೋಟಿ ರೂಪಾಯಿ ವಿನಿಯೋಗಿಸಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಎಕ್ಸ್ ಮಾಧ್ಯಮದಲ್ಲಿ, ತಿಳಿಸಿದ್ದಾರೆ. ರಾಜ್ಯದ ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ, ಕಳೆದ 3 ವರ್ಷಗಳಲ್ಲಿ, ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗಾಗಿ, 34 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಲಾಗಿದೆ. ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ, 73 ಸಾವಿರದ 982 ವಿದ್ಯಾರ್ಥಿಗಳಿಗೆ, 176 ಕೋಟಿ ರೂಪಾಯಿ ಪ್ರೋತ್ಸಾಹ ಧನ ವಿತರಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

<><><>

**ಉತ್ತರಕನ್ನಡ ಜಿಲ್ಲೆ, ಕಾರವಾರದ** ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ, 200 ಹಾಸಿಗೆಗಳ, ಹೊಸ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು, 100 ಕೋಟಿ ರೂಪಾಯಿಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು, ಸಚಿವ ಸಂಪುಟ, ಆಡಳಿತಾತ್ಮಕ ಅನುಮೋದನೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ನಡೆದ, ಸಚಿವ ಸಂಪುಟ ಸಭೆಯ ಬಳಿಕ, ಸಂಸದೀಯ ವ್ಯವಹಾರಗಳ ಖಾತೆ ಸಚಿವ, ಎಚ್.ಕೆ. ಪಾಟೀಲ, ಮಾಹಿತಿ ನೀಡಿದರು. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಎನ್.ಜಿ.ಇ.ಎಫ್. ಲಿಮಿಟೆಡ್ ಸಂಸ್ಥೆಗೆ ನೀಡಿದ, ದುಡಿಯುವ ಬಂಡವಾಳ ರೂಪದ ಸಾಲ, 2 ಕೋಟಿ ರೂಪಾಯಿಗಳು ಮತ್ತು ಅದರ ಮೇಲಿನ ಬಡ್ಡಿ, 4 ಕೋಟಿ ರೂಪಾಯಿ ಸೇರಿ, ಒಟ್ಟು 6 ಕೋಟಿ ಹಾಗೂ 10 ಕೋಟಿ ರೂಪಾಯಿಗಳ, ಬಡ್ಡಿ ರಹಿತ ಸಾಲವನ್ನು, ಈಕ್ವಿಟಿಯಾಗಿ ಪರಿವರ್ತಿಸಲು, ಸಂಪುಟ ಸಭೆ ನಿರ್ಧರಿಸಿದೆ.

<><><>

**ಪಾರಿಸಾರಿಕ ವ್ಯವಸ್ಥೆ,** ವನ್ಯಜೀವಿ ಮತ್ತು ನೈಸರ್ಗಿಕ ಆವಾಸ ಸ್ಥಾನಗಳ ರಕ್ಷಣೆಯ, ಪ್ರಾಮುಖ್ಯತೆ ಬಗ್ಗೆ, ಜನ ಜಾಗೃತಿ ಮೂಡಿಸುವ ದಿನವಿಂದು. ವಿಶ್ವಸಂಸ್ಥೆ, ಮೇ 22ನ್ನು, ಜಾಗತಿಕ ಜೀವ ವೈವಿಧ್ಯ ದಿನವೆಂದು ಘೋಷಿಸಿದೆ. "ಜಾಗತಿಕ ಪರಿಣಾಮಕ್ಕಾಗಿ, ಸ್ಥಳೀಯವಾಗಿ ಕಾರ್ಯನಿರ್ವಹಿಸುವುದು" ಎಂಬ ಧ್ಯೇಯದೊಂದಿಗೆ, ಸಮುದಾಯ ಸಂಚಾಲಿತ, ಸಣ್ಣ ಪ್ರಯತ್ನಗಳ ಮೇಲೆ, ಜಾಗತಿಕ ಸಂರಕ್ಷಣಾ ಗುರಿಗಳ ಯಶಸ್ಸು, ಹೆಚ್ಚು ಅವಲಂಬಿತವಾಗಿದೆ ಎಂಬುದನ್ನು, ಸಾರುವ ದಿನ. *ಕುನ್ಮಿಂಗ್–ಮಾಂಟ್ರಿಯಲ್ ಗ್ಲೋಬಲ್ ಬಯೋಡೈವರ್ಸಿಟಿ ಫ್ರೇಮ್‌ವರ್ಕ್,* 23 ಜಾಗತಿಕ ಗುರಿಗಳನ್ನು ಬೆಂಬಲಿಸುವಲ್ಲಿ, ಸಾಮುದಾಯಿಕ ಸಹಭಾಗಿತ್ವದ ಸ್ವಚ್ಛತಾ ಅಭಿಯಾನ, ಸಸಿ ನೆಡುವುದು ಮತ್ತು ಸ್ಥಳೀಯ ಪರಿಸರ ಕೊಂಡಿಗಳ ಮರುಸ್ಥಾಪನೆಗೆ, ಈ ಬಾರಿಯ ಜಾಗತಿಕ ಜೀವ ವೈವಿಧ್ಯ ದಿನ, ಮೀಸಲಾಗಿದೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಧಾರವಾಡದ ಮಾವು ಬೆಳೆಗಾರರ ಬಳಗ, '**ಬೆಳೆಗಾರರಿಂದ ಬಳಕೆದಾರರಿಗೆ' ಎಂಬ ಧ್ಯೇಯದೊಂದಿಗೆ, ಧಾರವಾಡದ ಗಾಂಧಿ ಶಾಂತಿ ಪ್ರತಿಷ್ಠಾನ ಕೇಂದ್ರದಲ್ಲಿ, ಸಾವಯವ ಮಾವು ಮೇಳವನ್ನು, ಕಳೆದ 1ನೇ ತಾರೀಖಿನಿಂದ ಆರಂಭಿಸಿದೆ. ರಾಸಾಯನಿಕ ಮುಕ್ತ; ಉತ್ತಮ ಗುಣಮಟ್ಟದ ಹಾಗೂ ನೈಸರ್ಗಿಕವಾಗಿ ಮಾಗಿಸಿದ ಮಾವು ಹಣ್ಣುಗಳನ್ನು, ಸ್ವತಃ ಮಾವು ಬೆಳೆಗಾರರೇ ನೇರವಾಗಿ, ಮಾರಾಟಕ್ಕೆ ಅಣಿಗೊಳಿಸಿದ್ದಾರೆ ಎಂದು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಮಾವು ಕೃಷಿಕ ಹಾಗೂ ಧಾರವಾಡದ ಮಾವು ಬೆಳೆಗಾರರ ಬಳಗದ ಗೌರವಾಧ್ಯಕ್ಷ, ಡಾಕ್ಟರ್ ರಾಜೇಂದ್ರ ಪೋದ್ದಾರ.

<><><>

**ರಾಜೇಂದ್ರ ಪೋದ್ದಾರ ಧ್ವನಿ 60 ಸೆಕೆಂದುಗಳು**

<><><>

**ಆಕಾಶವಾಣಿ 90 ಹಿನ್ನೆಲೆ,** ಆಕಾಶವಾಣಿ ಮೈಸೂರು ಕೇಂದ್ರ, ಮಂಡ್ಯದ ಕೆ.ವಿ.ಎಸ್. ಭವನದಲ್ಲಿ, 'ಮುಂಗಾರು ಮಳೆ-ಇಳೆ ಕಾವ್ಯಧಾರೆ' ಮತ್ತು ಬಾನುಲಿ ಬರವಣಿಗೆ ಕಾರ್ಯಾಗಾರ, ಆಯೋಜಿಸಿತ್ತು. ವಿಶ್ರಾಂತ ಪ್ರಾಂಶುಪಾಲರಾದ, ಡಾಕ್ಟರ್ ಲೀಲಾ ಅಪ್ಪಾಜಿ, ಕಾರ್ಯಾಗಾರಕ್ಕೆ ಚಾಲನೆ ನೀಡಿದರು. ಕರ್ನಾಟಕ ಸಂಘದ ಅಧ್ಯಕ್ಷ ಪ್ರೊಫೆಸರ್ ಜಯಪ್ರಕಾಶಗೌಡ, ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಬಾನುಲಿ ನಾಟಕಗಳು ಕುರಿತು, ಜಿ.ಶಾಂತಕುಮಾರ, ವಿಶೇಷ ರೂಪಕ ಮತ್ತು ಸಾಕ್ಷಿಚಿತ್ರ ಕುರಿತು, ಬಿ.ದಿಗ್ವಿಜಯ್ ಹಾಗೂ ಚಿಂತನ ಮತ್ತು ಭಾಷಣಗಳ ಕುರಿತು, ಮೈಸೂರು ಉಮೇಶ, ಬಾನುಲಿ ಬರವಣಿಗೆ ಕಾರ್ಯಾಗಾರ ನಡೆಸಿಕೊಟ್ಟರು. ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳ ಕವಿಗಳು, ಕವಿತೆ ವಾಚಿಸಿದರು. ಆಕಾಶವಾಣಿ ಮೈಸೂರು ಕೇಂದ್ರದ ಸಹಾಯಕ ನಿರ್ದೇಶಕ, ಮಂಜುನಾಥ ಎನ್.ಬೇದ್ರೆ ಹಾಗೂ ಕಾರ್ಯಕ್ರಮ ನಿರ್ವಾಹಕ ಎನ್.ಕೇಶವಮೂರ್ತಿ, ಕಾರ್ಯಾಗಾರ ಸಂಯೋಜಿಸಿದರು.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಮಾಜಿ ಪ್ರಧಾನಮಂತ್ರಿ, ರಾಜೀವ ಗಾಂಧಿ ಅವರ,** ಹುತಾತ್ಮ ದಿನದ ಅಂಗವಾಗಿ, ಭಯೋತ್ಪಾದನಾ ವಿರೋಧಿ ದಿನದ ಪ್ರಮಾಣ ವಚನ ಸ್ವೀಕಾರವನ್ನು, ರಾಜ್ಯದ ಎಲ್ಲ ಜಿಲ್ಲಾಡಳಿತಗಳು, ಕೈಗೊಂಡ ವರದಿಗಳು ಬಂದಿವೆ.

<><><>

**ಶಿವಮೊಗ್ಗದ ಸಕ್ರೆಬೈಲು ಆನೆ ಬಿಡಾರಕ್ಕೆ** ಇಂದಿನಿಂದ, ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

<><><>

**ಶಿವಮೊಗ್ಗ ಜಿಲ್ಲೆ, ತ್ಯಾವರೆಕೊಪ್ಪದ ಹುಲಿ-ಸಿಂಹ ಧಾಮದ,** ಸಫಾರಿ ವೀಕ್ಷಣೆಗೆ, ಮಂಗಳವಾರ 26 ರಂದು, ಅವಕಾಶ ಕಲ್ಪಿಸಲಾಗಿದೆ.

<><><>

**ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆ–2ರ** ಫಲಿತಾಂಶವನ್ನು, ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ, karresults.nic.in ಜಾಲತಾಣದಲ್ಲಿ, ಪ್ರಕಟಿಸಿದೆ.

<><><>

**ಆಕಾಶವಾಣಿ ಕಲಬುರಗಿ ಕೇಂದ್ರ,** ಇಂದು ಬೆಳಗ್ಗೆ 11 ಗಂಟೆಗೆ, ಕಲ್ಯಾಣ ವಾಣಿ ಕಾರ್ಯಕ್ರಮದಲ್ಲಿ, ಪೊಲೀಸ್ ಆಯುಕ್ತ, ಡಾಕ್ಟರ್ ಎಸ್.ಡಿ. ಶರಣಪ್ಪ, ಅವರ ನೇರ ಫೋನ್ ಇನ್ ಕಾರ್ಯಕ್ರಮ ಏರ್ಪಡಿಸಿದೆ.

<><><>

**ಜುಲೈ 11 ರಂದು, ರಾಜ್ಯದ ನ್ಯಾಯಾಲಯಗಳಲ್ಲಿ,** ರಾಷ್ಟ್ರೀಯ ಲೋಕ್ ಅದಾಲತ್, ಆಯೋಜಿತವಾಗಿದೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ,** ಜನಪ್ರಿಯ 'ಮನ್ ಕಿ ಬಾತ್'ನ 134ನೇ ಆವೃತ್ತಿ, ಈ ತಿಂಗಳ 31ರಂದು, ಭಾನುವಾರ ಬೆಳಗ್ಗೆ 11 ಗಂಟೆಗೆ ಪ್ರಸಾರವಾಗಲಿದೆ. ನಾಗರಿಕರು ತಮ್ಮ ಅಭಿಪ್ರಾಯಗಳನ್ನು, ಈ ತಿಂಗಳ 29 ರೊಳಗೆ My Gov.in ಮೂಲಕ, ಹಂಚಿಕೊಳ್ಳಬಹುದು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ;** 6ನೇ ಆವೃತ್ತಿಯ, ಯುವ ವಿಜ್ಞಾನಿ ಕಾರ್ಯಕ್ರಮ, ಇಂದು ಬೆಂಗಳೂರಿನಲ್ಲಿ, ಸಂಪನ್ನ.

- **50 ಸಾವಿರಕ್ಕೂ ಅಧಿಕ, ವನವಾಸಿ** ಕುಟುಂಬಗಳಿಗೆ, ಪೌಷ್ಟಿಕ ಆಹಾರ ಪೂರೈಕೆ – ಮುಖ್ಯಮಂತ್ರಿ ಸಿದ್ದರಾಮಯ್ಯ.

- **ಧಾರವಾಡದ ಮಾವು ಬೆಳೆಗಾರರ ಬಳಗದಿಂದ,** ಸಾವಯವ ಮಾವು ಮೇಳ.

- **ಆಕಾಶವಾಣಿಗೆ 90;** ಆಕಾಶವಾಣಿ ಮೈಸೂರು ಕೇಂದ್ರದ, ಬಾನುಲಿ ಬರವಣಿಗೆ ಕಾರ್ಯಾಗಾರ, ಯಶಸ್ವಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>